# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಸಕಲೇಶಪುರ

## C.C.No. 80/2022

| | | |
|---|---|---|
| ಹೆಸರುಃ | ವಿನಯ್ | CW-6 |
| ತಂದೆ/ಗಂಡ ಹೆಸರುಃ | ಶಂಕರ್ | PW-4 |
| ವಯಸ್ಸು | 35 ವರ್ಷ | |
| ವೃತ್ತಿ | ಬಿಲ್ ಕಲೆಕ್ಟರ್ | |
| ವಿಳಾಸಃ | ಕಾರ್ಮುಗೆ ಗ್ರಾಮ | **ದಿನಾಂಕಃ27-09-2023** |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಶ್ರೀ ಎ ಪಿ ಪಿ ಯವರಿಂದ

ಆರೋಪಿತರು ಪರಿಚಯವಿಲ್ಲ. ಚಾಸಾ-7 ಗೊತ್ತು. ಈಗ ನನಗೆ ತೋರಿಸಿದ ಮಹಜರ್ ನಲ್ಲಿ ನನ್ನ ಸಹಿ ಇದ್ದು, ಸದರಿ ಸಹಿಯನ್ನು ಸುಮಾರು ಎರಡು ವರ್ಷಗಳ ಹಿಂದೆ ದೇವಲಕೆರೆ ಗ್ರಾಮದಲ್ಲಿ ಹಾಕಿರುತ್ತೇನೆ. ಪೋಲೀಸರು ಯಾವ ವಿಚಾರಕ್ಕೆ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಸಾಕ್ಷಿ ಮಹಜರ್ನಲ್ಲಿರುವ ತನ್ನ ಸಹಿ ನೋಡಿ ಗುರ್ತಿಸಿದ್ದರಿಂದ ಮಹಜರನ್ನು ನಿ.ಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 2 ಎ ಎಂದು ಗುರ್ತಿಸಲಾಯಿತು.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)*

**ಪಾಟೀ ಸವಾಲು ಃ ಎ ಪಿ ಪಿ ಯವರಿಂದ.**

ದಿಃ 25-08-2021 ರಂದು ಹಾನುಬಾಳು ಹೋಬಳಿ ದೇವಲಕೆರೆ ಗ್ರಾಮದ ಚಾಮುಂಡೇಶ್ವರಿ ದೇವಸ್ಥಾನದ ಮುಂಭಾಗ ಪೋಲೀಸರು 1 ನೇ ಆರೋಪಿಯ ಬಾಲ್ಯ ವಿವಾಹ ಆದ ಬಗ್ಗೆ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಸಂಜೆ 4.15 ರಿಂದ 5.00 ಗಂಟೆವರೆಗೆ ಕೃತ್ಯ ಸ್ಥಳ ಮಹಜರ್ ಮಾಡಿ ಮಹಜರ್ ಗೆ ಸ್ಥಳದಲ್ಲೇ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ

ಇಲ್ಲ

ಮರು ವಿಚಾರಣೆಃ ಇಲ್ಲ

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೆ ಕೇ ಸ ಇ

ಜೆ ಎಂ ಎಫ್ ಸಿ, ಸಕಲೇಶಪುರ